# ಶ್ರದ್ಧೆ ಮತ್ತು ಸಿನಿಕತನ

ಕಠೋಪನಿಷತ್‌ನಲ್ಲಿ ಬರುವ ನಚಿಕೇತನ ಕಥೆಯಲ್ಲಿ 'ಶ್ರದ್ಧೆ' ಎಂಬುದನ್ನು ಅತ್ಯಂತ ವ್ಯಾಪಕಾರ್ಥದಲ್ಲಿ ಬಳಸಲಾಗಿದೆ. ಬಾಲಕ ನಚಿಕೇತ ತನ್ನ ತಂದೆ ಕೈಗೊಂಡಿರುವ ಯಾಗದಲ್ಲಿ ದಕ್ಷಿಣೆಗಾಗಿ ತರಿಸಿದ್ದ ಹಸುಗಳನ್ನು ಗಮನಿಸುತ್ತಾನೆ. ಅವು ಮುದಿಯಾಗಿರುತ್ತವೆ. ಅತ್ಯಂತ ನಿರುಪಯುಕ್ತವಾಗಿರುತ್ತವೆ. ಅವನ್ನ ಕಂಡ ನಚಿಕೇತ ಖಿನ್ನನಾಗುತ್ತಾನೆ. 'ಆತ ಶ್ರದ್ಧೆಯ ಆದೇಶಕ್ಕೆ ಒಳಗಾಗುತ್ತಾನೆ' (ಶ್ರದ್ಧಾ ಆದಿವೇಶ) ಎನ್ನುತ್ತದೆ ಉಪನಿಷತ್ತು. ಇಲ್ಲಿ 'ಶ್ರದ್ಧೆ' ಎಂಬ ಪದವನ್ನು ವಿಶೇಷ ಅರ್ಥದಲ್ಲಿ ಉಪನಿಷತ್ತಿನ ಋಷಿ ಉಪಯೋಗಿಸಿದ್ದಾರೆ. ನಚಿಕೇತನನ್ನು ಆವರಿಸಿದ ಶ್ರದ್ಧೆ ಆತನನ್ನು ಜನ ಮರಣಗಳ ರಹಸ್ಯವನ್ನು ತಿಳಿಯಲು ಪ್ರೇರೇಪಿಸುತ್ತದೆ. ಉಪನಿಷತ್ತಿನ ಪ್ರಕಾರ ಶ್ರದ್ಧೆ ಎಂಬುದು ಯಾವುದೋ ಒಂದು ಗುರಿಯನ್ನು ಎಟುಕಿಸಿಕೊಳ್ಳಬೇಕೆಂಬ ತುಡಿತಕ್ಕೆ ಕಾರಣವಾಗುವ ಒಂದು ಹಂಬಲ ಅಂಥ ಶ್ರದ್ಧೆಯೇ ನಚಿಕೇತನ (ಸಾವಿನಾಚೆಯ ಬದುಕಿನ) ಅನ್ವೇಷಣೆಗೆ ಚಾಲಕ ಶಕ್ತಿಯಾಗುತ್ತದೆ. ರೂಢಿಯಲ್ಲಿ ಶ್ರದ್ಧೆ ಎಂಬುದನ್ನು ಯಾವುದಾದರೊಂದು ವಿಚಾರಲ್ಲಿನ ವಿಶೇಷ ಆಸಕ್ತಿಯೆಂದೋ, ಯಾವುದಾದರೊಂದು ತತ್ವ ಅಥವಾ ಸಿದ್ಧಾಂತದ ಕುರಿತಾದ ನಂಬಿಕೆಯೆಂದೋ ಬಳಸಲಾಗುತ್ತದೆ. ವಿದ್ಯೆಯಲ್ಲಿ ಶ್ರದ್ಧೆ, ಆಚಾರದಲ್ಲಿ ಶ್ರದ್ಧೆ, ಮತಶ್ರದ್ಧೆ– ಎಂಬಂಥ ಮಾತುಗಳು ಚಲಾವಣೆಯಲ್ಲಿರುವುದು ಶ್ರದ್ಧೆಯ ರೂಢಿಗತ ಅರ್ಥದಲ್ಲಿಯೇ ಆದರೆ, ವಿಶಾಲಾರ್ಥದಲ್ಲಿ ಶ್ರದ್ಧೆ ಎಂದರೆ ನಮ್ಮಲ್ಲೇ ನಮಗಿರುವ ನಂಬಿಕೆ ಹಾಗೂ ವಿಶ್ವದ ಎಲ್ಲ ಚಟುವಟಿಕೆ, ವ್ಯವಸ್ಥೆಗಳ ಹಿಂದೆ ಯಾವುದೋ ಮಹಾಚೈತನ್ಯವಿದೆ ಎಂಬ ವಿಶ್ವಾಸ, ಇದನ್ನೇ ಆಚಾರ್ಯ ಶಂಕರರು 'ಆಸ್ತಿಕ್ಯ ಮನೋಭಾವ' ಎನ್ನುತ್ತಾರೆ. ಒಟ್ಟಿನಲ್ಲಿ ಶ್ರದ್ಧೆ ಎಂಬುದೊಂದು ಇತ್ಯಾತ್ಮಕ ಗುಣ, ವ್ಯಕ್ತಿಯ ಆರೋಹಣ ಕ್ರಿಯೆಗೆ ಇರುವ ಬಹುದೊಡ್ಡ ಆಲಂಬನ. ನಮ್ಮಲ್ಲಿ ಅದು ಮೊದಲು 'ಭಾವಶ್ರದ್ಧೆ'ಯಾಗಿ ಕಾಣಿಸಿಕೊಂಡು, ಅನಂತರ 'ಕಾರ್ಯಶ್ರದ್ಧೆ'ಯಾಗಿ ಪರಿವರ್ತಿತವಾದಾಗ, ನಮ್ಮ ಉದ್ದೇಶಿತ ಗುರಿ ಎಟುಕುವಂತಾಗುತ್ತದೆ, ಜ್ಞಾನ ದೇಗುಲಕ್ಕೆ ಶ್ರದ್ಧೆಯೇ ಪ್ರವೇಶದ್ವಾರ. 'ಶ್ರದ್ಧಾವಾನ್ ಲಭತೇ ಜ್ಞಾನಮ್' ಎಂಬ ಪ್ರಸಿದ್ಧ ಹೇಳಿಕೆಯೇ ಇದೆಯಲ್ಲವೆ? 'ಮಾನವ ಮಾನವರ ನಡುವಣ ವ್ಯತ್ಯಾಸಕ್ಕೆ ಅವರಲ್ಲಿನ ಶ್ರದ್ಧಾವ್ಯತ್ಯಾಸವೇ ಕಾರಣ' ಎಂಬುದು ಸ್ವಾಮಿ ವಿವೇಕಾನಂದರ ಮಾತು. ಅಭ್ಯಾಸದಲ್ಲಿನ ಶ್ರದ್ಧೆಯ ವ್ಯತ್ಯಾಸವೇ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯಲ್ಲಿನ ವ್ಯತ್ಯಾಸಕ್ಕೆ ಬಹುಮುಖ್ಯ ಕಾರಣವೆಂಬುದು ಸುಳ್ಳಲ್ಲ.

ಶ್ರದ್ಧೆಗೆ ವಿರೋಧವೆನ್ನಿಸುವ ಗುಣವೆಂದರೆ 'ಸಿನಿಕತನ' (Cynicism), ಇಂಗ್ಲಿಷಿನ 'ಸಿನಿಕ್' ಎಂಬ ಪದ ಕನ್ನಡದಲ್ಲಿ 'ಸಿನಿಕ' ಎಂದೇ ಬಳಕೆಯಾಗುತ್ತಿದೆಯಷ್ಟೆ. ಯಾವ ವಿಚಾರದಲ್ಲೂ ಶ್ರದ್ಧೆ ಅಥವಾ ವಿಶ್ವಾಸ ಇಲ್ಲದಿರುವಾತನೇ 'ಸಿನಿಕ' ಎಂದು ಸ್ಥೂಲವಾಗಿ ವ್ಯಾಖ್ಯಾನಿಸಬಹುದು, ಅಷ್ಟೇ ಅಲ್ಲ; ಸಿನಿಕನೆಂದರೆ ಸರ್ವತಿರಸ್ಕಾರಿ; ಆತನದು ಛಿದ್ರಾನ್ವೇಷಕ ಪ್ರವೃತ್ತಿ. ಆತ ಕೆನೆ ಮೊಸರಲ್ಲಿ ಕಲ್ಲನ್ನೇ ಕಾಣುತ್ತಾನೆ, ಪರಿಶುದ್ಧವಾಗಿರುವ ಬಿಳಿಯ ಗೋಡೆಯಲ್ಲಿ ಕಪ್ಪು ಚುಕ್ಕೆಯನ್ನೇ ಹುಡುಕಿ ಖುಷಿಪಡುತ್ತಾನೆ; ಪರವಶಗೊಳಿಸುವ ಸಂಗೀತದಲ್ಲಿ ಅಪಸ್ವರವನ್ನು ಕಂಡುಹಿಡಿಯಲು ಕಾತರಿಸುತ್ತಾನೆ. ಆತ ಬೆಳಕಿಗೆ ಬೆನ್ನು ಹಾಕಿ ನಡೆಯುವ 'ತಮೋ ವಿಹಾರಿ'! ಜಗತ್ತಿನಲ್ಲಿರುವ ಯಾವುದರಲ್ಲೂ ಆತನಿಗೆ ಒಳಿತೆಂಬುದು ಕಾಣಿಸುವುದೇ ಇಲ್ಲ. ಆದ್ದರಿಂದಲೇ ಟೀಚರ್ ಎಂಬ ಚಿಂತಕ ಸಿನಿಕನನ್ನು 'ಮನುಷ್ಯ ರೂಪದ ಗೂಬೆ' ಎಂದು ವರ್ಣಿಸಿದ್ದಾನೆ. ಗೂಬೆ ಹಗಲಲ್ಲಿ ನಿದ್ರಿಸಿ, ರಾತ್ರಿಯ ಕತ್ತಲಲ್ಲಿ ಎಚ್ಚೆತ್ತು, ಕ್ರಿಮಿಕೀಟಗಳನ್ನು ತಿನ್ನುತ್ತಾ ಬದುಕುವ ಕ್ಷುದ್ರ ಜೀವಿ. ಹಾಗೆಯೇ ಸಿನಿಕನೂ ಎಲ್ಲ ಒಳ್ಳೆಯ ಸಂಗತಿಗಳಿಂದಲೂ ದೂರವಿದ್ದು, ದೋಷಗಳನ್ನೇ ಧ್ಯಾನಿಸುವ 'ದೋಷಾರಾಧಕ'.

ಶ್ರದ್ಧೆ ಮನುಷ್ಯನಲ್ಲಿ ಸಕಾರಾತ್ಮಕ ಭಾವನೆಗಳನ್ನು ಹುಟ್ಟುಹಾಕಿ, ಆತ್ಮಶಕ್ತಿಯನ್ನು ಉದ್ದೀಪನಗೊಳಿಸುತ್ತದೆ; ಆದರೆ ಅಶ್ರದ್ಧೆ (ಸಿನಿಕತನ) ನಕಾರಾತ್ಮಕ ಪ್ರವೃತ್ತಿಯನ್ನು ಬೆಳೆಸಿ, ಆತ್ಮ ಸ್ಥೈರ್ಯವನ್ನು ನಾಶಮಾಡುತ್ತದೆ. ಶ್ರದ್ಧೆ ಎಂದರೆ ಎಲ್ಲವನ್ನೂ ವಿನಾಕಾರಣ ನಂಬುವ ಪೆದ್ದುತನವಲ್ಲ, ವಿಚಾರ, ವಿಮರ್ಶೆಗಳ ಸಹಾಯದಿಂದ ಸತ್ಯವನ್ನು ಕಂಡುಕೊಂಡು, ಅದನ್ನೇ ದೃಢವಾಗಿ ನೆಚ್ಚಿಕೊಳ್ಳುವ ವಿವೇಕ ಶ್ರದ್ಧೆಯ ಹಿನ್ನೆಲೆಯಲ್ಲಿರುತ್ತದೆ. ಶ್ರದ್ಧಾವಂತನಾದಾತ ಬೆಳೆಯುತ್ತಾನೆ; ಸಿನಿಕ ಕುಬ್ಜನಾಗುತ್ತಾನೆ. ಏಕೆಂದರೆ ಸಿನಿಕತನ ಮನುಷ್ಯನ ಭಾವನಾತ್ಮಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಮೌಲ್ಯದ್ವೇಷಿಯಾದ ಸಿನಿಕ ಸಾಮಾಜಿಕ ಪಿಡಗು ಎನ್ನಿಸಿಕೊಳ್ಳುತ್ತಾನೆ!

■ ವೈನತೇಯ

## ಮಾತೇ ಮುತ್ತು

★ ಅವರು ಮೊದಲು ನಿಮ್ಮನ್ನು ನಿರ್ಲಕ್ಷಿಸುತ್ತಾರೆ. ಬಳಿಕ ನಿಮ್ಮನ್ನು ನೋಡಿ ನಗುತ್ತಾರೆ. ಆ ಬಳಿಕ ನಿಮ್ಮನ್ನು ಎದುರಿಸುತ್ತಾರೆ. ಕೊನೆಗೆ ನೀವು ಗೆಲ್ಲುತ್ತೀರಿ.

–ಮಹಾತ್ಮ ಗಾಂಧೀಜಿ

★ ಕುರಿಯೊಂದು ನಾಯಕತ್ವ ವಹಿಸಿರುವ ಸಿಂಹಗಳ ಸೇನೆಗೆ ನಾನು ಹೆದರುವುದಿಲ್ಲ. ಆದರೆ ಸಿಂಹವೊಂದು ನೇತೃತ್ವ ವಹಿಸಿರುವ ಕುರಿಗಳ ಸೈನ್ಯಕ್ಕೆ ಹೆದರುತ್ತೇನೆ.

–ಅಲೆಗ್ಸಾಂಡರ್

★ ಒಬ್ಬನೇ ವೈರಿಯ ಜತೆಗೆ ಪದೇ ಪದೇ ಹೋರಾಡಬೇಡಿ. ಅದರಿಂದ ನಿಮ್ಮ ಸಮರಕಲೆಯ ಕೌಶಲ್ಯಗಳನ್ನೆಲ್ಲ ಅವನಿಗೆ ಕಲಿಸಿದಂತಾಗುತ್ತದೆ.

–ನೆಪೋಲಿಯನ್ ಬೊನಪಾರ್ಟ್

★ ರಾಜಕೀಯ ಮತ್ತು ಯುದ್ಧದ ಕಲೆಯನ್ನು ನಾನು ಕಲಿಯಲೇಬೇಕು. ಹಾಗೆ ಮಾಡಿದರೆ ಮುಂದೆ ನನ್ನ ಮಕ್ಕಳು ಗಣಿತ ಮತ್ತು ತತ್ವಜ್ಞಾನವನ್ನು ಕಲಿಯಬಹುದು.

–ಜಾನ್ ಆಡಮ್ಸ್

★ ಇರುವುದು ಒಂದೇ ಅಪರಾಧ, ಅದುವೇ ಕಳ್ಳತನ. ನೀವು ಸುಳ್ಳಾಡಿದರೆ ಇನ್ನೊಬ್ಬನ ಸತ್ಯ ತಿಳಿಯುವ ಹಕ್ಕನ್ನು ಕಳ್ಳತನ ಮಾಡಿದಂತೆ.

–ಖಾಲಿದ್ ಹುಸೇನಿ

★ ಕೆಡುಕಿನ ಬೀಜವನ್ನೇ ನಾಶ ಮಾಡಿ. ಇಲ್ಲವಾದಲ್ಲಿ ಅದು ಬೆಳೆದು ನಿಮ್ಮನ್ನೇ ನಾಶ ಮಾಡುತ್ತದೆ.

–ಚೀನೀ ಗಾದೆ

★ ಮಾನವ ಅಸ್ತಿತ್ವದ ಎಲ್ಲ ಸಮಸ್ಯೆಗಳಿಗೂ ಪ್ರೇಮವೊಂದೇ ನಿಜವಾದ ಮತ್ತು ಸರಿಯಾದ ಪರಿಹಾರ.

–ಎರಿಕ್ ಫ್ರಾಮ್

★ ಪ್ರೇಮಿಸಲ್ಪಡುವವನು ಬಡವನೆಂದು ಯಾರು ಹೇಳಿದ್ದು?

–ಆಸ್ಕರ್ ವೈಲ್ಡ್

★ ಏಕತೆಯೂ ದ್ವಂದ್ವವೂ ಪ್ರೇಮದಲ್ಲಿ ಮಾತ್ರ ಇದೆ; ಸಂಘರ್ಷದಲ್ಲಿ ಇಲ್ಲ.

–ರವೀಂದ್ರನಾಥ ಠಾಗೋರ್

★ ಪ್ರೀತಿಯ ಹಸಿವೆಯನ್ನು ನಿವಾರಿಸುವುದು, ಹೊಟ್ಟೆಯ ಹಸಿವನ್ನು ನಿವಾರಿಸುವುದಕ್ಕಿಂತ ಹೆಚ್ಚು ಕಷ್ಟಕರವಾದದ್ದು.

–ಮದರ್ ತೆರೆಸಾ

★ ಪುಸ್ತಕವು ಜೇಬಿನಲ್ಲಿ ಕೊಂಡೊಯ್ಯಬಹುದಾದ ಹೂತೋಟದಂತೆ.

–ಚೀನೀ ಗಾದೆ

★ ಕುರುಡರ ರಾಜ್ಯದಲ್ಲಿ ಒಕ್ಕಣ್ಣನೇ ಚಕ್ರವರ್ತಿ.

–ಜಪಾನೀ ಗಾದೆ

★ ದಾರಿ ಗೊತ್ತಿರುವವನು, ಆ ದಾರಿಯಲ್ಲಿ ನಡೆಯುವವನು ಮತ್ತು ಇತರರಿಗೆ ದಾರಿ ತೋರುವವನು ಮಾತ್ರ ನಿಜವಾದ ನಾಯಕ.

–ಜಾನ್ ಮ್ಯಾಕ್ಸ್‌ವೆಲ್

★ ನಿಜವಾದ ನಾಯಕನ ಲಕ್ಷಣವೆಂದರೆ ಆತ ಯಾವತ್ತೂ ಆಗಬಹುದು ಎನ್ನಬೇಕು. ಆಗಲ್ಲ ಎಂದರೆ ಆತ ನಾಯಕನಾಗುವುದಿಲ್ಲ.

–ಟೋನಿ ಬ್ಲೇರ್